1	2	3	4	5	6	7	8	9	10	11	12	13
329	Ramachandraiah, Kunigal.	93-94	ASR	51/94	1828000	-	-	-	-	-	1828000	-
330	Sathischandra & Co. Karwar.	85-86	ASR	WA No.6734/95	2345280	-	-	-	-	-	2345280	-
331	Sathischandra & Co. Ankola.	85-86	ASR	6734/95	2271000	-	-	-	-	-	2271000	-
332	Devdas.A.Karwar	85-86	ASR	WA No.6734/95	112500	-	349277	790995	-	-	461777	790995
333	Jattin V.Attawar, Batkal.	90-91	ASR	WP 11134/91 & 6734/95	-	242898	-	-	937405	787706	937405	1030604
334	Sridhar.M.Darwar	9192	ASR	OS 6747/93	3101975	-	-	-	-	-	3101975	-
335	Sridhar.M.Karwar.	93-94	ASR	OS 55/94	3219600	-	-	-	-	-	3219600	-
-	-	-	-	-	-	-	-	-	-	-	-	-
	Grand Total				187740568	178056754	245792387	230535992	1151704629	636821417	1045514153	15879839084
-	-	-	-	-	-	-	-	-	-	-	-	-

ಕರ್ನಾಟಕ ವಿಧಾನಸಭೆ

ಸೋಮವಾರ 8 ನೇ ಜುಲೈ 1996 ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11- 10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: ರಮೇಶ್ ಕುಮಾರ್ ಅವರು ಪೀಠವನ್ನು ಅಲಂಕರಿಸಿದ್ದರು.

ವಿದ್ಯುತ್ ದರ ಏರಿಕೆಯ ಬಗ್ಗೆ ಪ್ರತಿಭಟನೆ

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ರವರನ್ನು ಹೊರತುಪಡಿಸಿ ವಿರೋಧ ಪಕ್ಷದ ಎಲ್ಲಾ ಸದಸ್ಯರು ಸದನದ ಬಾವಿಯಲ್ಲಿ ಬಂದು ಧರಣಿ ಕುಳಿತಿದ್ದರು)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ ಕ್ಷೇತ್ರ): ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿ ದರ ಏರಿಕೆಯ ಬಗ್ಗೆ ಈ ಸದನದಲ್ಲಿ ತೀವ್ರವಾದಂಥ ಚರ್ಚೆಯನ್ನು, ಈ ಸದನದಲ್ಲಿ ತೀವ್ರವಾದಂಥ ಪ್ರತಿಭಟನೆ, ಒತ್ತಡ ಎಲ್ಲವನ್ನೂ ತಂದಿದ್ದರೂ, ಸಹ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಎಲ್ಲಾ ಪ್ರತಿಭಟನೆಯನ್ನೂ ಬದಿಗೊತ್ತಿ, ನಾನು ಮಾಡಿದ್ದೇ ಸರಿ ಎನ್ನತಕ್ಕಂಥ ನಿರ್ಧಾರವನ್ನು ಕೈಗೊಂಡಿದ್ದಾರೆ. ನನಗೆ ಪಾಪ ಅವರ ಬಗ್ಗೆ ಒಂದು ರೀತಿಯ ಕರುಣೆ ಮತ್ತು ಅನುಕಂಪ ಎರಡೂ ಇದೆ. ಆದರೂ ಅವರು ಯಾವ ಉದ್ದೇಶಕ್ಕೋಸ್ಕರವಾಗಿ ಈ ತರಹ ಮಾಡಿದ್ದಾರೆಂಬುದು ಅರ್ಥವಾಗುತ್ತಿಲ್ಲ. ಈ ಕೂಡಲೇ ಸರ್ಕಾರ ವಿದ್ಯುಚ್ಛಕ್ತಿಯ ದರವನ್ನು ಇಳಿಸಬೇಕೆಂದು ಹೇಳುತ್ತಾ ನಾವು ಸಭಾತ್ಯಾಗ ಮಾಡುತ್ತಿದ್ದೇವೆ ಸ್ವಾಮಿ. ಏಕೆಂದರೆ ಇದು ತೀವ್ರವಾದಂಥ ವಿಚಾರ. . . .

ಅಧ್ಯಕ್ಷರು: ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು, ಹಿರಿಯ ಮುಖಂಡರುಗಳೆಲ್ಲಾ ಇದ್ದೀರಿ. ಈಗ ನಾನು ತಮ್ಮಲ್ಲಿ ಏನು ವಿನಂತಿ ಮಾಡಿಕೊಳ್ಳವುದೇನೆಂದರೆ ನಮ್ಮ ಮೊದಲನೆಯ ಕಾರ್ಯಕ್ರಮ ಉಪಾಧ್ಯಕ್ಷರ ಚುನಾವಣೆ ಇದೆ. ಮೊನ್ನೆಯೂ ಸಹ ನಾನು ತಮ್ಮೆಲ್ಲರನ್ನೂ ವಿನಂತಿ ಮಾಡಿಕೊಂಡಿದ್ದೇನೆ. ಇದುಸರ್ಕಾರದ ನಡವಳಿಕೆಗೆ ಸಂಬಂಧಿಸಿದ ವಿಷಯವಲ್ಲ; ಇದು ನಮ್ಮ ಸದನದ ಕಾರ್ಯಕಲಾಪಗಳಿಗೆ ಸೀಮಿತವಾಗಿರತಕ್ಕಂಥ ವಿಷಯ, ಈ ವಿಚಾರದಲ್ಲಿ ತಮ್ಮೆಲ್ಲರಿಗೂ ಜವಾಬ್ದಾರಿ ಇದೆ. ದಯಮಾಡಿ ಈ ವಿಚಾರಕ್ಕೆ ನನ್ನ ಜೊತೆ ಸಹಕರಿಸಿ, ಉಳಿದ ಹಾಗೆ ತಮ್ಮ ನಿಲುವು ಏನಿದೆ ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ತಾವು ಏನು ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಅಪೇಕ್ಷಪಡುತ್ತೀರಿ ಅದಕ್ಕೆ ತಾವು ಸರ್ವಸ್ವತಂತ್ರರಿದ್ದೀರಿ; ಅದು ನಿಮ್ಮ ಹಕ್ಕು ಕೂಡ. ಅನುಭವಸ್ಥರಿದ್ದೀರಿ, ಹಿರಿಯ ರಾಜಕಾರಣಿಗಳಿದ್ದೀರಿ, ಬಹಳ ವರ್ಷಗಳ ಕಾಲ ಈ ಸದನದಲ್ಲಿ ಕೆಲಸ ಮಾಡಿದ್ದೀರಿ, ದಯಮಾಡಿ ತಮ್ಮೆಲ್ಲರಲ್ಲೂ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಈ ಸದನದ ಒಂದು ಪರಂಪರೆಯನ್ನು ನಾವು ರಕ್ಷಿಸಿಕೊಂಡು ಹೋಗುವ ದೃಷ್ಟಿಯಿಂದ ದಯಮಾಡಿ ತಾವೆಲ್ಲರೂ ಸಹಕರಿಸಿ ತಮ್ಮ ಸ್ಥಾನಗಳಿಗೆ ಹಿಂದಿರುಗಬೇಕು. ಈ ಮೊದಲನೆ ಕಾರ್ಯಕ್ರಮವನ್ನು ಮಾಡಿಬಿಡೋಣವೆಂದು ನಾನು ತಮ್ಮಲ್ಲಿ ಕೈ ಜೋಡಿಸಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

(ಸದನದ ಬಾವಿಯಲ್ಲಿ ಧರಣಿ ಕುಳಿತಿದ್ದ ಎಲ್ಲಾ ವಿರೋಧ ಪಕ್ಷದ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಂಡರು)

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಅಧ್ಯಕ್ಷರೆ, ದಯಮಾಡಿ ಕ್ಷಮಿಸಬೇಕು, ನಿನ್ನೆಯೂ ಸಹ ತಾವು ವಿನಂತಿ ಮಾಡಿದ್ದೀರಿ. ನಿನ್ನೆ ಸನ್ಮಾನ್ಯ ಉಪಾಧ್ಯಕ್ಷರ ಚುನಾವಣೆಯನ್ನು, ನಮ್ಮಲ್ಲಿ ಹಾಕಿಕೊಂಡು ಬಂದಿರುವಂಥ ಸತ್ಸಂಪ್ರದಾಯದಂತೆ ಅದಕ್ಕೆ ನಾವು ಅವಕಾಶ ಮಾಡಿಕೊಡಬೇಕಾಗಿತ್ತು, ಆದರೆ ಅನಿವಾರ್ಯವಾಗಿ ರಾಜ್ಯದ ಜನರ ಹಿತದೃಷ್ಟಿಯಿಂದ ವಿದ್ಯುತ್ ದರವನ್ನು ಇಳಿಸಬೇಕೆಂದು ಧರಣಿ ಕುಳಿತಾಗ ಮಧ್ಯದಲ್ಲಿ ಈ ಕಾರ್ಯಕ್ರಮವನ್ನು ನಡೆಸಿದರೆ

ಸರಿಯಾಗುವುದಿಲ್ಲವೆಂದು ನಾವು ನಿರ್ಧರಿಸಿದ್ದೆವು. ಒಂದು ದೃಷ್ಟಿಯಿಂದ ಮೊನ್ನೆ ಅದು ಒಳ್ಳೆಯ ದಿವಸವಲ್ಲ ಸ್ವಾಮಿ. ನಮ್ಮ ಮುಖ್ಯಮಂತ್ರಿಗಳು ದಿನಾಂಕವನ್ನು ನಿಗಧಿಪಡಿಸುವಾಗ ಹೆಚ್ಚು ಕಡಿಮೆಯಾಗಿಯೋಚನೆ ಮಾಡದೆ ಕರೆದಿದ್ದರಿಂದ ಇದೆಲ್ಲಾ ಪ್ರಾರಂಭವಾಗಿದೆ. ಉಪಾಧ್ಯಕ್ಷರ ಚುನಾವಣೆ ಆದ ಮೇಲಾದರೂ ಬಹುಶಃ ಇವತ್ತು ಮನೆಯಲ್ಲಿ ಎಲ್ಲಾ ಕೇಳಿ ಮಾಡಿ, ಇದು ಆಗಲೇಬೇಕೆಂದು ಹೆಣ್ಣುಮಕ್ಕಳೂ ಸಹ ಎಲ್ಲಾ ಸದಸ್ಯರಿಗೆ ಸಲಹೆಯನ್ನು ಕೊಟ್ಟು ಕಳುಹಿಸಿರಬೇಕು. ವಿದ್ಯುತ್ ದರದ ಏರಿಕೆಯನ್ನು ವಾಪಸ್ ತೆಗೆದುಕೊಳ್ಳದೇ ಹೋದರೆ ನಾವು ಉಳಿಯುವುದಿಲ್ಲ, ನೀವು ಉಳಿಯುವುದಿಲ್ಲ ಎಂದು ಹೇಳಿ ಕಳುಹಿಸಿರುಬಹುದೆಂದು ಕಾಣುತ್ತದೆ. ಬಹುಶಃ ಮುಖ್ಯಮಂತ್ರಿಗಳು ಇವತ್ತು ಸರಿಯಾದ ನಿಲುವನ್ನು ತೆಗೆದುಕೊಳ್ಳುತ್ತಾರೆಂದು ನಾವೆಲ್ಲಾ ಭಾವಿಸಿದ್ದೇವೆ. ಉಪಾಧ್ಯಕ್ಷರ ಚುನಾವಣೆಯಾದ ಮೇಲೆ ತಾವು ನಮ್ಮ ಕಾರ್ಯಕ್ರಮವನ್ನು ನೆಡೆಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ತಾವು ವಿದ್ಯುತ್ ದರ ಏರಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳದೇ ಇದ್ದರೆ, ನಾವು ನಿಮ್ಮ ಮನೆಯವರ ನಾಯಕತ್ವದಲ್ಲಿ ಮೆರವಣಿಗೆ ಮಾಡಿಸಬೇಕಾಗುತ್ತದೆ. ಏಕೆಂದರೆ ಮನೆಯ ಹೆಣ್ಣುಮಕ್ಕಳು ಯಾರೂ ನಿಮ್ಮನ್ನು ಬಿಡುವುದಿಲ್ಲ. . .

ಅಧ್ಯಕ್ಷರು:- ಬಹಳ ಜನ ಬರಬೇಕಾಗುತ್ತದೆ, ತಾವು ಕುಳಿತುಕೊಳ್ಳಿ, ಎಲ್ಲಾ ಗೊತ್ತಿದ್ದು ನೀವು ಹೀಗೆ ಮಾತನಾಡಿದರೆ ಹೇಗೆ ಹೇಳಿ?

ಶ್ರೀ ಕೆ.ಎಸ್.ಈಶ್ವರಪ್ಪ:- ಅಧ್ಯಕ್ಷರೆ, ಬರೀ ಅವರ ಹೆಣ್ಣುಮಕ್ಕಳೇ ಸಾಕು , ಬೇರೆ ಹೊರಗಡೆ ಹೆಣ್ಣುಮಕ್ಕಳು ಬೇಡ.

ಅಧ್ಯಕ್ಷರು:- ಇವರು ಆ ಇಲಾಖೆಯವರೇ ಅಲ್ಲ.

ಶ್ರೀ ವಾಟಾಳ್ ನಾಗರಾಜ್:- ಇಲ್ಲ, ನೀವು ಬಹಳ ಮಾರ್ಮಿಕವಾಗಿ ಹೇಳುತ್ತಿದ್ದೀರಿ ಅದನ್ನು ಇಲ್ಲಿ ಬಹಿರಂಗಪಡಿಸುವುದು ಬೇಡ ಹೋಗಲಿ ಬಿಡಿ.

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ಆದಿಯಾಗಿ, ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಮತ್ತೆ ಎಲ್ಲಾ ವಿರೋಧ ಪಕ್ಷದ ಮುಖಂಡರುಗಳು, ನಾನು ಸದನದ ಗೌರವವನ್ನು ಕಾಪಾಡುವ ದೃಷ್ಟಿಯಿಂದ ಮಾಡಿಕೊಂಡ ಈ ಮನವಿಯನ್ನು ಗೌರವಿಸಿದ್ದಕ್ಕೆ ಅವರನ್ನು ತುಂಬು ಹೃದಯದಿಂದ ಅಭಿನಂದಿಸುತ್ತಿದ್ದೇನೆ. ಈಗ ನಾವು ಮುಂದಿನ ಕಾರ್ಯಕ್ರಮಕ್ಕೆ ಹೋಗೋಣ, ಉಪಾಧ್ಯಕ್ಷರ ಚುನಾವಣೆ. ನಮ್ಮ ಉಪಾಧ್ಯಕ್ಷರ ಚುನಾವಣೆಗೆ ಎರಡು ಸೂಚನೆಗಳು ಬಂದಿದ್ದಾವೆ. ಮೊದಲನೆಯ ಸೂಚನೆಯನ್ನು ಕಳುಹಿಸಿದಂಥ ಸೂಚಕರು ಶ್ರೀಮಾನ್ ಎಂ.ಪಿ.ಪ್ರಕಾಶ್‌ರವರು ತಮ್ಮ ತಾಯಿಯವರ ಆರೋಗ್ಯ ಸರಿಯಿಲ್ಲದೆ ಇರುವುದರಿಂದ ಅವರು ಇವತ್ತು ಸದನಕ್ಕೆ ಹಾಜರಾಗುವುದಕ್ಕಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ನಾನು ಎರಡನೆ ಸೂಚನೆಯನ್ನು ತೆಗೆದುಕೊಳ್ಳುತ್ತಿದ್ದೇನೆ. ಶ್ರೀ ಚಂದ್ರಶೇಖರ್ ಮಲ್ಲಿಕಾರ್ಜುನ ಮಾಮನಿಯವರನ್ನು ವಿಧಾನಸಭೆಯ ಉಪಾಧ್ಯಕ್ಷರನಾಗಿ ಚುನಾಯಿಸಬೇಕೆಂದು ಶ್ರೀ ಪಿ.ಸಿ. ಸಿದ್ದನಗೌಡರ್ ಸೂಚಿಸುವುದು.

ಉಪಾಧ್ಯಕ್ಷರರ ಚುನಾವಣೆ

ಶ್ರೀ ಪಿ.ಸಿ.ಸಿದ್ಧನಗೌಡರ್ (ಕಲಘಟಗಿ):- ಮಾನ್ಯ ಅಧ್ಯಕ್ಷರೆ, ಶ್ರೀ ಚಂದ್ರ ಶೇಖರ ಮಲ್ಲಿಕಾರ್ಜುನ ಮಾಮನಿ ಅವರನ್ನು ಹತ್ತನೇ ವಿಧಾನ ಸಭೆಯ ಉಪಾಧ್ಯಕ್ಷರನ್ನಾಗಿ